ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಅವರೇ ನಮಗೆ ಮಾಹಿತಿ ಕೊಡಲಿ. ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ? ಇದರಲ್ಲಿ ಏತಕ್ಕೋಸ್ಕರ ಡಿಸ್ಕ್ರಿಮಿನೇಷನ್? ಎಲ್ಲಾ ರಾಜಕೀಯ ಪಕ್ಷಗಳೊಡನೆ ಸೌಜನ್ಯದಿಂದ ಈ ಬಗ್ಗೆ ಅವರು ವಿಚಾರ ಮಾಡಬೇಕಾಗಿತ್ತು.

ಇನ್ನೊಂದು ವಿಷಯ. ಅತಿ ಮುಖ್ಯವಾದುದು. ಕ್ಷಾಮ ಪರಿಹಾರದ ಬಗ್ಗೆ ಸರ್ಕಾರದ ಇಂಗಿತ ಏನೆಂಬುದು ಗೊತ್ತಾಗಬೇಕಾಗಿದೆ. ಆದಕಾರಣ ದಯವಾಡಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇನ್ನೂ ಮಂತ್ರಿಗಳು ವಿರೋಧಪಕ್ಷಗಳ ನಾಯಕರ ಜೊತೆಯಲ್ಲಿ ಈ ವಿಚಾರವಾಗಿ ವಾತನಾಡುವುದು ಒಳ್ಳೆಯದು. ಈ ವಿಚಾರದಲ್ಲಿ ರಾಜ್ಯ ಸರ್ಕಾರದವರು ಇದುವರೆಗೂ ಏಕೆ ಯೋಚನೆ ಮಾಡಲಿಲ್ಲ? ತಾವೇ ಸೇರಿಕೊಂಡಂತೆ ಆ ಕಮಿಟಿಯನ್ನು ರಚನೆ ಮಾಡಿದ್ದಾರೆ. ಬೇರೆ ಯಾವ ಪಕ್ಷಕ್ಕೂ ಅವಕಾಶವಿಲ್ಲ ಇದು ಎಲ್ಲಾ ಪಕ್ಷಗಳಿಗೂ ಸಂಬಂಧಪಟ್ಟ ಪ್ರಶ್ನೆ. ಇದನ್ನು ಮುಖ್ಯಮಂತ್ರಿಗಳು ಯಾವ ಆಧಾರದ ಮೇಲೆ ಮಾಡಿದ್ದಾರೆ. ಏಕೆ ಇವರು ಎಲ್ಲಾ ರಾಜಕೀಯ ಪಕ್ಷಗಳನ್ನು ಸೌಜನ್ಯದಿಂದ ಕಂಡಿಲ್ಲ, ಅವರಿಗೆ ತಕ್ಕ ಸ್ಥಾನಮಾನವನ್ನು ಕೊಟ್ಟಿಲ್ಲ. ಅದನ್ನು ದಯವಾಡಿ ಹೇಳಬೇಕು.

ಅಧ್ಯಕ್ಷರು.—ತಾವು ಹೇಳಿದ ತಕ್ಷಣವೇ ಅವರಿಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಎಲ್ಲಾ ಪಾರ್ಟಿಯವರು ಆ ಕಮಿಟಿಯಲ್ಲಿದ್ದಾರೆಯೇ? ನಾವು ಆ ಸಮಿತಿಯಲ್ಲಿರಬೇಕು. 25 ವರ್ಷಗಳ ಒಂದು ಬೆಳ್ಳಿ ಹಬ್ಬವನ್ನು ಆಚರಿಸುವಾಗ ನಾವೆಲ್ಲರೂ ಸಂತೋಷವಾಗಿರಬೇಕು. ಇದರಲ್ಲಿ ಮಡಿವಂತಿಕೆ ಏಕೆ ಇರಬೇಕು?

ಅಧ್ಯಕ್ಷರು.—ತಾವು ಹೇಳಿದ್ದಕ್ಕೂ ಮತ್ತು ಮಾನ್ಯ ಶ್ರೀ ಬಂಗಾರಪ್ಪನವರು ಹೇಳಿದ್ದಕ್ಕೂ ಏನೊಂದೂ ವ್ಯತ್ಯಾಸವಿಲ್ಲ.

ಶ್ರೀ ವಾಟಾಳ್ ನಾಗರಾಜ್—ಈ ವಿಚಾರಗಳನ್ನು ನಿಮ್ಮ ಹತ್ತಿರ ಹೇಳದೆ ನಾವು ಇನ್ನು ಯಾರ ಹತ್ತಿರ ಹೋಗಿ ಹೇಳುವುದು ತಾವು ಒಬ್ಬರೇ ನಮಗೆ ಇರುವವರು. ನೀವು ಅಧ್ಯಕ್ಷರಾಗಿ ಇರುವುದರಿಂದ ನಿಮ್ಮ ಹತ್ತಿರ ಹಾಗೂ ನಿಮ್ಮ ಮೂಲಕ ಸರ್ಕಾರದವರನ್ನು ಕೇಳುತ್ತಿದ್ದೇವೆ. ನಿಮ್ಮನ್ನು ಬಿಟ್ಟು ನಾವು ಅವರನ್ನು ಕೇಳುವಹಾಗೆ ಇಲ್ಲ. ಆದ್ದರಿಂದ ಮಾನ್ಯ ಶ್ರೀ ಹುಚ್ಚಮಾಸ್ತಿ ಗೌಡರ ಹೇಳಿಕೆಯಾದ ನಂತರ, ಇವರ ಬಗ್ಗೆ ಒಂದು ಅಂಶವನ್ನಾದರೂ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಕೊಡುತ್ತಾರೆ?

ಶ್ರೀ ಡಿ. ದೇವರಾಜ್ ಅರಸ್.—ಇದರಲ್ಲಿ ಯಾವ ಒಂದು ದೊಡ್ಡ ಹೇಳಿಕೆಯನ್ನು ಕೊಡಬೇಕಾಗಿಲ್ಲ. ಅವರೆಲ್ಲರನ್ನೂ ಮುಂಚೆ ಆ ಕಮಿಟಿಯಲ್ಲಿ ಸೇರಿಸಬೇಕೆಂದು ಮಾಡುವುದಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಸಂತೋಷವಾಯಿತು.

Statement by the Minister for Revenue: *re*: Scarcity Conditions in the State

†ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಅಧ್ಯಕ್ಷರೇ ರಾಜ್ಯದ ನಾನಾ ಭಾಗಗಳಲ್ಲಿ ಇರತಕ್ಕ ಅಭಾವ ಪರಿಸ್ಥಿತಿ ಬಗ್ಗೆ ಮಾನ್ಯ ಸದಸ್ಯರುಗಳು ವಿವರಗಳು ಬೇಕೆಂದು ಹೇಳಿದ್ದಕ್ಕಾಗಿ ನಾನು ಒಂದು ಹೇಳಿಕೆಯನ್ನು ಇಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಬಿಜಾಪುರದಲ್ಲಿ ಒಟ್ಟು 35 ಲಕ್ಷ ಎಕರೆ ವ್ಯವಸಾಯ ಭೂಮಿಯಲ್ಲಿ ಸುಮಾರು 20 ಲಕ್ಷ ಎಕರೆ ಭೂಮಿ ರಾಬಿ ಬೆಳೆ ಬರತಕ್ಕದ್ದು. 15 ಲಕ್ಷ ಎಕರೆ ಖರೀಪ್ ಬರತಕ್ಕದ್ದು. 3 ಲಕ್ಷ 31 ಸಾವಿರ ಎಕರೆ ಮಾತ್ರ ಬಿತ್ತನೆಯಾಗಿದೆ. ಉಳಿದ ಭೂಮಿಯಲ್ಲಿ ಬಿತ್ತನೆಯಾಗಲಿಲ್ಲ. ಈಗ ಬಿತ್ತನೆ ಕಾಲ ಮುಗಿದುಹೋಗಿದೆ.

ಇನ್ನು ಮಳೆಯ ವಿಷಯವನ್ನು ವಿವರವಾಗಿ ಹೇಳಬಹುದು. ನನ್ನ ಹತ್ತಿರ 21 ಪುಟಗಳ ಒಂದು ಹೇಳಿಕೆ ಇದೆ. ಅದನ್ನು ವಿವರವಾಗಿ ಹೇಳುವುದಕ್ಕೆ ಬದಲಾಗಿ ಮುಖ್ಯಾಂಶಗಳನ್ನು ಮಾತ್ರ ಹೇಳುತ್ತೇನೆ. 239 ಕಾಮಗಾರಿಗಳನ್ನು ಈಗ ಪ್ರಾರಂಭ ಮಾಡಿದೆ. ಅವನ್ನು 64ನೇ ಪ್ಯಾಮಿನ್ ರಿಲೀಫ್ ಫಂಡಿನಿಂದ ಪ್ರಾರಂಭ ಮಾಡಿದೆ. ಅದರ ಜೊತೆಗೆ 162 ಕೆಲಸಗಳನ್ನು ಹೊಸದಾಗಿ ತೆಗೆದುಕೊಳ್ಳಬೇಕೆಂಬುದಾಗಿ ತೀರ್ಮಾನ ಮಾಡಿ ಆ ಕೆಲಸಗಳನ್ನು ಈಗಾಗಲೇ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡಿದೆ. ಈಗ ಅಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳಲ್ಲಿ ಫ್ಯಾಮಿನ್ ರಿಲೀಫ್ ಕೆಲಸಗಳಲ್ಲಿ 7,556 ಜನರೂ, ಸಾಯಿಲ್ ಕನ್‌ಸರ್‌ವೇಷನ್ನಿನಲ್ಲಿ 10 ಸಾವಿರ ಜನರೂ ಮತ್ತು ಮೈನರ್ ಇರಿಗೇಷನ್ನಿನಲ್ಲಿ ಸುಮಾರು 2 ಸಾವಿರ ಜನರೂ ಕೆಲಸ ಮಾಡುತ್ತಿದ್ದಾರೆ. ಲೋಕೋಪಯೋಗಿ ಇಲಾಖೆಯ 13 ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಎನ್. ಎಚ್. ಸಿ. ಯಲ್ಲಿ 2 ಸಾವಿರ ಜನರೂ, ಸಿ. ಎನ್. ಇ. ಪ್ರೊಗ್ರಾಂನಲ್ಲಿ 620 ಜನರೂ ಮತ್ತು ಎಂ. ಎಫ್. ಎಲ್. ಪ್ರೊಗ್ರಾಂನಲ್ಲಿ 1018 ಜನರೂ ಅಫಾರೆಸ್ಟೇಷನ್ನಿನಲ್ಲಿ 400 ಜನರೂ ಆಲಮಟ್ಟಿಯಲ್ಲಿ 500 ಜನರೂ—ಹೀಗೆ ಒಟ್ಟು 36,500 ಜನರೂ ಕೆಲಸ ಮಾಡುತ್ತಿದ್ದಾರೆ. 72-73ನೇ ಸಾಲಿಗೆ 10 ಲಕ್ಷದ 77 ಸಾವಿರದ 800 ರೂಪಾಯಿಗಳನ್ನು ಈ ಬಿಜಾಪುರ ಜಿಲ್ಲೆಗೆ ಮಾತ್ರ ಒದಗಿಸಿತ್ತು. ಅದರಲ್ಲಿ 5 ಲಕ್ಷ 49 ಸಾವಿರದ 700 ರೂಪಾಯಿಗಳು ಖರ್ಚಾಗಿವೆ. ಅದು 15-7-72ಕ್ಕೆ ಮುಂಚೆ ಅದರ ಜೊತೆಗೆ ಬೆಳಗಾಂ ಡಿವಿಜನ್ ಮೂಲಕ 7 ಲಕ್ಷ ರೂಪಾಯಿಗಳಷ್ಟು ಹಣವನ್ನು ಒದಗಿಸಿದೆ. ಇನ್ನೂ ಹೆಚ್ಚು ಹಣ ಬೇಕೆಂದು ಜಿಲ್ಲಾಧಿಕಾರಿಗಳು ಬಂದು ಮನವಿಯನ್ನು ಕಳುಹಿಸಿದ್ದಾರೆ. ಆ ಹಣವನ್ನೂ ಸಹ ಒದಗಿಸುವುದಕ್ಕೆ ಸರ್ಕಾರ ಈಗಾಗಲೇ ತೀರ್ಮಾನವನ್ನು ಕೈಗೊಂಡಿದೆ. ಅದರ ಜೊತೆಗೆ ಅದು ಡ್ರಾಟ್ ಜೋನ್ ಏರಿಯಾ ಆಗಿರುವುದರಿಂದ ಅಲ್ಲಿನ 7 ತಾಲ್ಲೂಕುಗಳಿಗೂ 82 ಲಕ್ಷದ 54 ಸಾವಿರ ರೂಪಾಯಿಗಳನ್ನು ಇದಕ್ಕೊಸ್ಕರವೇ ಇಟ್ಟಿದ್ದೇವೆ. ಹೀಗಿರುವಾಗ ಸಾಯಿಲ್ ಕನ್‌ಸರ್‌ವೇಷನ್, ಮೈನರ್ ಇರಿಗೇಷನ್, ಅಫಾರೆಸ್ಟೇಷನ್, ಫ್ಲೋಡ್—ಈ ನಾಲ್ಕು ವಿಧವಾದ ಕಾರ್ಯಕ್ರಮಗಳು ಅಲ್ಲಿ ನಡೆಯುತ್ತಿವೆ. ಈಗಾಗಲೇ ಆ ಪ್ರೊಗ್ರಾಂಗಳಿಗೆ 9 ಲಕ್ಷ 63 ಸಾವಿರ ರೂಪಾಯಿಗಳು ಖರ್ಚಾಗಿವೆ. ಈಗ ಡಿವಿಜನರ್ ಕಮಿಷನರಿಗೆ ಇರತಕ್ಕ ಅಧಿಕಾರವನ್ನು ಡೆಪ್ಯುಟಿ ಕಮಿಷನರ್ ಮುಖಾಂತರ ಬೇಗ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕಾಗಿ ಅವರು ಆ ಕೆಲಸಗಳನ್ನು ಕೈಗೊಳ್ಳುವುದಕ್ಕೆ ಅವರಿಗೆ ಅಧಿಕಾರ ಕೊಡಲಾಗಿವೆ. ಮತ್ತೆ ಆಹಾರ ಧಾನ್ಯಗಳನ್ನು ಹಂಚಿಕೆ ಮಾಡುವಿಕೆಯ ವಿಷಯದಲ್ಲಿ ನಾನು ಹೇಳಬೇಕಾದರೆ, 978 ಫೇರ್ ಪ್ರೈಸ್ ಷಾಪ್ಸ್ ಪ್ರಾರಂಭವಾಗಿವೆ. ಅಲ್ಲಿರತಕ್ಕ ಧಾನ್ಯಗಳಲ್ಲಿ ಜೋಳ, 7887 ಕ್ವಿಂಟಾಲ್, ಗೋಧಿ 297 ಕ್ವಿಂಟಾಲ್, ಅಕ್ಕಿ 1347 ಕ್ವಿಂಟಾಲ್, ಸಜ್ಜೆ 2970 ಕ್ವಿಂಟಾಲ್, ಮುಸುಕಿನ ಜೋಳ 4597 ಕ್ವಿಂಟಾಲ್ ಇದೆ. ಇನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಕೂಡಲೇ ತಕಾವಿ ಸಾಲಕ್ಕೋಸ್ಕರ 50 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಕೈಗೊಳ್ಳಲಾಗಿದೆ. ಮತ್ತೆ ಡೆಪ್ಯುಟಿ ಕಮಿಷನರ್ ಇನ್ನೂ ಹೆಚ್ಚು ಧಾನ್ಯ ಬೇಕಾದಲ್ಲಿ ಯಾವ್ಯಾವು ಪದಾರ್ಥಗಳು ಎಷ್ಟೆಷ್ಟು ಬೇಕೆಂಬುದಕ್ಕೆ ಕೂಡಲೇ ಇಂಡೆಂಟ್ ಕಳುಹಿಸಬೇಕೆಂದು ತಿಳಿಸಿದೆ. ಅಲ್ಲಿ ಹುಲ್ಲು ಸಾಕಾದಷ್ಟು ಇದೆ. ಆದರೆ ಅದು ಬೇರೆ ಕಡೆಗೆ ಹೋಗುತ್ತಿದೆ. ನಮಗೆ ಈಗ ಅದರ ಬಗ್ಗೆ ವರ್ತಮಾನ ಬಂದ ಮೇಲೆ ಬೇರೆ ರಾಜ್ಯಕ್ಕೆ ಅದು ಹೋಗುತ್ತಾ ಇರುವುದನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ಎಮರ್ಜೆನ್ಸಿ ಫುಡ್ ಪ್ರೊಗ್ರಾಂನಲ್ಲಿ 784 ಸೆಂಟರುಗಳಲ್ಲಿ ಪ್ರಾರಂಭ ಮಾಡಿದೆ. 54,645 ಸ್ಕೂಲು ಮಕ್ಕಳಿಗೆ ಮತ್ತು ನರ್ಸರಿ ಸ್ಕೂಲಿನಲ್ಲಿರತಕ್ಕ 51,731 ಮಕ್ಕಳಿಗೆ ಈ ಪ್ರೊಗ್ರಾಂನಲ್ಲಿ ತಕ್ಕ ಆಹಾರ ಸೌಕರ್ಯವನ್ನು ಒದಗಿಸಬೇಕೆಂದು ಪ್ರಯತ್ನವಾಗುತ್ತಿದೆ. ಅವುಗಳನ್ನು ಸೆಪ್ಟೆಂಬರ್ ಅಖೈರಿನೊಳಗೆ ಕೊಡಬೇಕೆಂದು ತಿಳುವಳಿಕೆ ಕೊಡಲಾಗಿದೆ. ಕುಡಿಯುವ ನೀರಿನ ಬಾವಿಗಳ ವಿಷಯದಲ್ಲಿ ಈಗಾಗಲೇ ರಿಗ್ ಯಂತ್ರಗಳ ಮೂಲಕ 36 ಬಾವಿಗಳನ್ನು ತೆಗೆಸಲಾಗಿದೆ. ಅವುಗಳ ಪೈಕಿ 29 ಬಾವಿಗಳಿಗೆ ಪಂಪ್ ಹಾಕಲಾಗಿದೆ. ಈ ಪೈಕಿ 7 ಬಾವಿಗಳಲ್ಲಿ ನೀರು ಬಿದ್ದಿಲ್ಲ ಅಥವಾ ಬರತಕ್ಕ ಸೂಚನೆಗಳಿಲ್ಲ ಎಂದು ವರದಿ ಬಂದಿದೆ.

2-30 P.M.

ಇನ್ನು 1972ನೇ ಜೂನ್ ಅಖೈರಿನವರೆಗೂ ಇರಿಗೇಷನ್ ಬಾವಿಗಳಿಗಾಗಿ ಕೊಟ್ಟಿರತಕ್ಕ ಸಾಲಗಳ ವಿವರ ಈ ರೀತಿಯಿದೆ. ಬಾಗಿಲುಕೋಟೆ ತಾಲ್ಲೂಕಿಗೆ 352 ಬಾವಿಗಳಿಗೆ; ಬಾಗೇವಾಡಿ ತಾಲ್ಲೂಕಿನಲ್ಲಿ 388 ಬಾವಿಗಳಿಗೆ; ಮಧೋಳ್ ತಾಲ್ಲೂಕಿನಲ್ಲಿ 360 ಬಾವಿಗಳಿಗೆ; ಬಿಜಾಪುರ ತಾಲ್ಲೂಕಿನಲ್ಲಿ 442 ಬಾವಿಗಳಿಗೆ; ಹುನುಗುಂದ ತಾಲ್ಲೂಕಿನಲ್ಲಿ 192 ಬಾವಿಗಳಿಗೆ, ಇಂಡಿಗಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ತಾಲ್ಲೂಕಿನಲ್ಲಿ 433 ಬಾವಿಗಳಿಗೆ, ಜಮಖಂಡಿ ತಾಲ್ಲೂಕಿನಲ್ಲಿ 561 ಬಾವಿಗಳಿಗೆ, ಬಾದಾಮಿ ತಾಲ್ಲೂಕಿನಲ್ಲಿ 527 ಬಾವಿಗಳಿಗೆ ಸಿಂದಗಿ ತಾಲ್ಲೂಕಿನಲ್ಲಿ 428 ಬಾವಿಗಳಿಗೆ, ಬಳಿಗಿಯಲ್ಲಿ 61 ಬಾವಿಗಳಿಗೆ ಹಣ ಮಂಜೂರಾಗಿದೆ. 1971—72ಕ್ಕೆ ಬಾವಿಗಳಿಗಾಗಿ ಮಂಜೂರಾಗಿದ್ದ 75 ಲಕ್ಷ 86 ಸಾವಿರ ರೂಪಾಯಿಗಳನ್ನು ಕೊಡಲಾಗಿದೆ. ಮತ್ತೆ, ಇವರ ಜೊತೆಗೆ ಲ್ಯಾಂಡ್ ಇಂಪ್ರೂವ್ ಮೆಂಟ್ ಬಗ್ಗೆಯೂ ಮತ್ತು 64 ಫ್ಯಾಮಿನ್ ಹೆಡ್ಡಿನಲ್ಲೂ ಸಾಲ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಆಜ್ಞೆ ಮಾಡಲಾಗಿದೆ. ಅವರು ಈ ಆಜ್ಞೆಯ ಪ್ರಕಾರ 27 ಜನರಿಗೆ ಬಾವಿ ತೋಡಿಸಲು ಹಣವನ್ನು ಒದಗಿಸಿಕೊಟ್ಟಿದ್ದಾರೆ. ಇಷ್ಟೂ ಆ ಬಿಜಾಪುರ ತಾಲ್ಲೂಕಿಗೆ ಸಂಬಂಧಪಟ್ಟ ವಿಷಯ.

ಇನ್ನು ಧಾರವಾಡ ಜಿಲ್ಲೆಯ ವಿಚಾರಕ್ಕೆ ಬಂದರೆ—ಅಲ್ಲಿ ಆಗಿರತಕ್ಕ ಮಳೆ ವಿವರಗಳನ್ನು ಮಾನ್ಯ ಅಧ್ಯಕ್ಷರ ಟೇಬಲ್ ಮೇಲೆ ಇಡುತ್ತೇನೆ ಅದನ್ನು ಮಾನ್ಯ ಸದಸ್ಯರು ನೋಡಿಕೊಳ್ಳಬಹುದು. ನವಲಗುಂದ, ನರಗುಂದ, ಗದಗ್, ರೋಣ, ಮುಂಡರ್ಗಿ ಬ್ಯಾಡಗಿ, ಸಿರಹಟ್ಟಿ ಮತ್ತು ಗಾಣಿಬೆನ್ನೂರು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಮಾತ್ರ ಕ್ಷಾಮ ಬಿದ್ದಿದೆ ಎಂದಬುದಾಗಿ ನಮಗೆ ತಿಳಿದು ಬಂದಿದೆ. ಇಷ್ಟು ಜಾಗಗಳಲ್ಲಿ ಮಾತ್ರ ಅಭಾವ ಪರಿಸ್ಥಿತಿಯುಂಟಾಗಿದೆ ಎಂಬುದಾಗಿ ಸರ್ಕಾರಕ್ಕೆ ತಿಳಿದು ಬಂದಿದೆ. ಇನ್ನುಳಿದ ತಾಲ್ಲೂಕುಗಳಲ್ಲಿ ಅಷ್ಟು ತೊಂದರೆಗಳು ಕಂಡುಬರುವುದಿಲ್ಲ. ಅಲ್ಲಿ ಬಿತ್ತನೆ ಮಾಡುವುದಕ್ಕೆ ಮಳೆ ಬಾರದೆ ಅವಕಾಶ ಆಗಿಲ್ಲ ಎಂದು ಹೇಳುತ್ತಿದ್ದಾರೆ.

1972—73ನೇ ಸಾಲಿನಲ್ಲಿ ಈ ಭಾಗಕ್ಕೆ 8 ಲಕ್ಷ ರೂಪಾಯಿಗಳ ಹಣವನ್ನು ಕೊಡಲಾಗಿದೆ. ಅದರಲ್ಲಿ ತಾ: 30—6—1972ಕ್ಕೆ 4 ಲಕ್ಷ ರೂ.ಗಳು ಮಾತ್ರ ಖರ್ಚಾಗಿದೆ. ಇನ್ನೂ ಒಂಭತ್ತು ಅಪೂರ್ಣವಾದ ಕೆಲಸಗಳು ಅಲ್ಲಿ ಉಳಿದಿವೆ. ನವಿಲುಗುಂದ, ನರಗುಂದ ತಾಲ್ಲೂಕುಗಳಲ್ಲಿ ಹೊಸ ಕೆಲಸವನ್ನು ತೆಗೆದುಕೊಳ್ಳುವಂತೆ ಅಲ್ಲಿನ ಪಿ.ಡಬ್ಲ್ಯು.ಡಿ. ಅಧಿಕಾರಿಗಳಿಗೆ ತಿಳಿಸಿರುತ್ತೆ. ನರಗುಂದ್ ತಾಲ್ಲೂಕಿನಲ್ಲಿ ಈಗಾಗಲೇ ಐದು ಹೊಸ ಕೆಲಸಗಳನ್ನು ಪ್ರಾರಂಭಮಾಡಿದ್ದು ಇನ್ನೂ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅವಕಾಶ ಇದೆಯೇ ಎಂಬುದನ್ನು ತಿಳಿಸಲು ಅಲ್ಲಿನ ಅಧಿಕಾರಿಗಳಿಗೆ ಕೇಳಲಾಗಿದೆ. ಇನ್ನು ಡಿ.ಪಿ.ಎ. ಪ್ರೋಗ್ರಾಂ (Drought Prone Area Programme) ಪ್ರಕಾರ ಕೆಲವು ತಾಲ್ಲೂಕುಗಳಲ್ಲಿ ಅಂದರೆ—ಕುಂದಗೋಳ್, ರಾಣಿ ಬೆನ್ನೂರು, ಹಾವೇರಿ, ಮುಂಡರ್ಗಿ ಮತ್ತು ರೋಣ ಈ ತಾಲ್ಲೂಕುಗಳಲ್ಲಿ 1972—73ನೇ ಸಾಲಿಗೆ ಸಾಯಿಲ್ ಕನ್‌ಸರ್ವೇಷನ್, ಮೈನರ್ ಇರಿಗೇಷನ್, ಅಫಾರೆಸ್ಟೇಷನ್ ಮತ್ತು ರಸ್ತೆಗಳ ಕೆಲಸ ಇಷ್ಟಕ್ಕಾಗಿ 38.49 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈಗಾಗಲೆ – ರಾಣಿಬೆನ್ನೂರು, ಹಾವೇರಿ, ಶಿರಹಟ್ಟಿ, ಸವಣೂರು, ಧಾರವಾಡ, ಗದಗ್, ಬ್ಯಾಡಗಿ, ಶಿಗ್ಗಾಂವ ಮತ್ತು ಹಿರೇಕೆರೂರು ಇಲ್ಲೆಲ್ಲಾ ಈ ಕೆಲಸಗಳು ನಡೆಯುತ್ತಿವೆ. ಅಲ್ಲಿ ಈಗಾಗಲೇ ಐದು ತಾಲ್ಲೂಕುಗಳಲ್ಲಿ 1,00,076 ರೂಪಾಯಿಗಳು ಖರ್ಚಾಗಿದೆ. ಸಾಯಿಲ್ ಕನ್‌ಸರ್ವೇಷನ ಕೆಲಸಕ್ಕಾಗಿ 4340 ಜನಕ್ಕೆ ಕೆಲಸವನ್ನು ಒದಗಿಸಲಾಗಿದೆ. ಇವಲ್ಲದೆ ಬಡ್ಜೆಟ್ಟಿನಲ್ಲಿ ಮಾಮೂಲಾಗಿ ಸಾಯಿಲ್ ಕನ್‌ಸರ್ವೇಷನ್ ಕೆಲಸಕ್ಕಾಗಿ ಒದಗಿಸಲಾಗಿದ್ದ ಹಣದ ಬಾಬ್ತು 38 ಸೆಂಟರುಗಳಲ್ಲಿ ಕೆಲಸ ನಡೆಯುತ್ತಿದೆ. ಅಲ್ಲಿ 18,000 ಜನರು ಪ್ರತಿದಿನವೂ ಕೆಲಸ ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಅಲ್ಲಿ ಖರ್ಚಾಗಿರತಕ್ಕ ಹಣ 7 ಲಕ್ಷ ರೂಪಾಯಿಗಳು. ಇಲ್ಲಿ ಜಾನುವಾರುಗಳಿಗೆ ಅಷ್ಟು ಹುಲ್ಲಿನ ತೊಂದರೆ ಇದ್ದಹಾಗೆ ಕಂಡುಬರುವುದಿಲ್ಲ.

ಇಲ್ಲಿ 1123 ಫೇರ್ ಪ್ರೈಜ್ ಡಿಪೋಗಳನ್ನು ತೆರೆಯಲಾಗಿದೆ. ಇಲ್ಲಿ ಹೆಚ್ಚು ಜನ ತಕಾವಿ ಸಾಲ ಬೇಕೆಂದು ಕೇಳುತ್ತಿದ್ದಾರೆ. ಅದಕ್ಕಾಗಿ ಅಲ್ಲಿಗೆ 50 ಲಕ್ಷ ರೂಪಾಯಿಗಳನ್ನು ಒದಗಿಸುವುದಕ್ಕೆ ಏರ್ಪಾಡನ್ನು ಮಾಡಲಾಗಿದೆ.

ಇನ್ನು ಎವರ್ಜನ್ಸಿ ಫೀಡಿಂಗ್ ಪ್ರೋಗ್ರಾಂನಲ್ಲಿ 273 ಸೆಂಟರುಗಳಲ್ಲಿ ದಿನವಹಿ 91 ಸಾವಿರ ಶಾಲಾಮಕ್ಕಳಿಗೆ ಆಹಾರವನ್ನು ಒದಗಿಸಲಾಗುತ್ತಿದೆ.

ಇನ್ನು ಕುಡಿಯುವ ನೀರಿನ ವಿಚಾರಕ್ಕೆ ಬಂದರೆ, 32 ಬೋರ್‌ವೆಲ್ಲುಗಳು ಕಂಪ್ಲೀಟಾಗಿವೆ. ಇವುಗಳಲ್ಲಿ 19ಕ್ಕೆ ಪಂಪ್‌ಸೆಟ್ಟನ್ನು ಫಿಟಪ್ ಮಾಡಿದೆ. ಇನ್ನು 3 ಗ್ರಾಮಗಳಲ್ಲಿ ಹಾಲಿ ಇರತಕ್ಕ ಬಾವಿಗಳ ಆಳವನ್ನು ಜಾಸ್ತಿ ಮಾಡುವುದಕ್ಕಾಗಿ 25,000 ರೂಪಾಯಿಗಳನ್ನು ಒದಗಿಸಲಾಗಿದೆ. ಈ ತಾಲ್ಲೂಕುಗಳು ಯಾವುವೆಂದರೆ—ಧಾರವಾಡ, ಹುಬ್ಬಳ್ಳಿ, ಗದಗ್, ರೋಣ, ಶಿರಹಟ್ಟಿ, ಮುಂಡರ್ಗಿ ಮತ್ತು ಶಿಗ್ಗಾಂವ್.

ಇನ್ನು ಇರಿಗೇಷನ್ ಬಾವಿಗಳಿಗಾಗಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಬಾವಿಗಳನ್ನು ತೋಡಿಸಲು ಒಪ್ಪಿಗೆ ಆಗಿದೆ. ಅದರ ವಿವರಗಳು ಹೀಗಿವೆ :—

ಧಾರವಾಡದಲ್ಲಿ ತೆಗೆಸತಕ್ಕ ಬಾವಿಗಳು	26	21	ಬಾವಿಗಳ ಕೆಲಸ ಮುಗಿದಿದೆ
ಕುಂದಗೋಳ್ ಡಿಟೊ	35	18	ಡಿಟೊ
ಹಾನಗಲ್ ಡಿಟೊ	65	19	ಡಿಟೊ
ಗದಗ್ ಡಿಟೊ	221	116	ಡಿಟೊ
ಹಾವೇರಿ ಡಿಟೊ	98	59	ಡಿಟೊ
ಹುಬ್ಬಳ್ಳಿ ಡಿಟೊ	75	45	ಡಿಟೊ
ಕಲ್ಘಟ್ಕಿ ಡಿಟೊ	26	16	ಡಿಟೊ
ಬ್ಯಾಡಗಿ ಡಿಟೊ	172	126	ಡಿಟೊ
ಲಕ್ಷ್ಮೇಶ್ವರ ಡಿಟೊ	291	92	ಡಿಟೊ
ನರಗುಂದ ಡಿಟೊ	10	7	ಡಿಟೊ
ನವಿಲಗುಂದ ಡಿಟೊ	18	9	ಡಿಟೊ
ರಾಣಿಬೆನ್ನೂರು ಡಿಟೊ	349	289	ಡಿಟೊ
ರೋಣ ಡಿಟೊ	106	63	ಡಿಟೊ
ಶಿಗ್ಗಾವಾಂ ಡಿಟೊ	84	56	ಡಿಟೊ
ಮುಂಡಗಿಸ್ ಡಿಟೊ	60	35	ಡಿಟೊ
ಹಿರೇಕೆರೂರ್ ಡಿಟೊ	434	290	ಡಿಟೊ
ನವಣೂರು ಡಿಟೊ	17	—	

ಇದರ ಜೊತೆಗೆ ನರಗುಂದ ತಾಲ್ಲೂಕಿನಲ್ಲಿ ಐದು ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ತಿಳಿಸಿದೆ.

ಇನ್ನು ಬೆಳಗಾಂ ಜಿಲ್ಲೆಯ ವಿಚಾರ :—

ಈ ಜಿಲ್ಲೆಯಲ್ಲಿ ರಾಯಬಾಗ್, ಅಥಣಿ, ಗೋಕಾಕ್, ರಾಮದುರ್ಗ, ಮತ್ತು ಸೌಂದತ್ತಿ, ಇವು ತಾಲ್ಲೂಕುಗಳಲ್ಲಿ ಅಭಾವವಂತಾಗಿದೆ ಎಂದು ತಿಳಿದುಬಂದಿದೆ. ಅಲ್ಲಿ ಶೇ. 15 ರಷ್ಟು ಮಾತ್ರ ಕಾರೀಫ್ ಬೆಳೆಬಿತ್ತನೆಯಾಗಿದ ಎಂದು ತಿಳಿದು ಬಂದಿದೆ. ಈ ಜಿಲ್ಲೆಗೆ ಈ ವರ್ಷ 5 ಲಕ್ಷ ರೂಪಾಯಿಗಳನ್ನು ಕೊಡಲಾಗಿತ್ತು. ಅದರಲ್ಲಿ 37 ಲಕ್ಷ ಮಾತ್ರ ಖರ್ಚಾಗಿದೆ. ಜೂನ್ 1972ಕ್ಕೆ ಅಲ್ಲಿ ಅಪೂರ್ಣವಾಗಿ ನಿಂತಿದ್ದ ರಿಲೀಫ್ ಕಾಂಗಾರಿಗಳನ್ನು ಮತ್ತೆ ಪ್ರಾರಂಭಮಾಡಲು ತಿಳಿಸಲಾಗಿದೆ. ಅಲ್ಲಿ ಹೊಸದಾಗಿ 20 ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಆರ್ಡರ್ ಮಾಡಲಾಗಿದೆ.

ಇನ್ನು ಅಲ್ಲಿ ಡಿ.ಪಿ.ಎ. (Drought Prone Area Programme) ಪ್ರೋಗ್ರಾಂನಲ್ಲಿ —ಐದು ತಾಲ್ಲೂಕುಗಳಲ್ಲಿ ಅಂದರೆ,—ಅಥಣಿ, ಗೋಕಾಕ್, ರಾಯಬಾಗ್, ರಾಮದುರ್ಗ ಮತ್ತು ಸೌಂದತ್ತಿ, ಈ ತಾಲ್ಲೂಕುಗಳಲ್ಲಿ ಈ ಪ್ರೋಗ್ರಾಂಗಾಗಿ 56.37 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಡಿ.ಪಿ.ಎ. ಪ್ರೋಗ್ರಾಂ ಅಡ್ಡಿದೆ ಅಲಾಯಿದ 154 ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕಾಗಿ ಹಾಗೂ 12000 ಜನಕ್ಕೆ ಉದ್ಯೋಗವನ್ನು ಒದಗಿಸುವುದಕ್ಕಾಗಿ ಅಲ್ಲಿ ಅಷ್ಟು ಕೆಲಸಗಳನ್ನು ಕೈಗೊಳ್ಳಲಾಗಿದೆ. ಈಗ ಅಲ್ಲಿ 876 ಫೀರ್ ಪ್ರೈಜ್ ಡಿಪೋಗಳು ಕೆಲಸಮಾಡುತ್ತಿವೆ. ಅಲ್ಲಿ ದಾಸ್ತಾನಿರತಕ್ಕ ಧಾನ್ಯಗಳ ವಿವರ ಈ ರೀತಿಯಿದೆ. ಬಿತ್ತ 1034 ಟನ್ ಗೋಧೀ 97 ಟನ್; ಮತ್ತು ಇತರೇ ಧಾನ್ಯಗಳು : 1146 ಟನ್‌ಗಳು.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇನ್ನು ಅಭಿವೃದ್ಧಿ ಬ್ಯಾಂಕ್ ಮೂಲಕ ಮಂಜೂರಾಗಿರತಕ್ಕ ಬಾವಿಗಳು ಮತ್ತು ಅವುಗಳಲ್ಲಿ ಕೆಲಸ ಪೂರ್ಣವಾಗಿರತಕ್ಕ ಬಾವಿಗಳ ವಿವರಗಳು ಹೀಗಿವೆ.

ಅಥಣಿ:	ಮಂಜೂರಾದ ಬಾವಿಗಳು	795	495 ಬಾವಿಗಳ ಕೆಲಸ ಪೂರ್ತಿಯಾಗಿದೆ
ಬೈಲುಹೊಂಗಲ	ಡಿಟೊ	375	233 ಡಿಟೊ
ಬೆಳಗಾಂ	ಡಿಟೊ	261	143 ಡಿಟೊ
ಚಿಕ್ಕೋಡಿ	ಡಿಟೊ	250	238 ಡಿಟೊ
ಗೋಕಾಕ್	ಡಿಟೊ	745	598 ಡಿಟೊ
ಹುಕ್ಕೇರಿ	ಡಿಟೊ	153	106 ಡಿಟೊ
ರಾಯಬಾಗ್	ಡಿಟೊ	516	437 ಡಿಟೊ
ಖಾನಾಪುರ	ಡಿಟೊ	129	42 ಡಿಟೊ
ಸೌಂದತ್ತಿ	ಡಿಟೊ	269	211 ಡಿಟೊ
ರಾಮದುರ್ಗ	ಡಿಟೊ	405	271 ಡಿಟೊ

ಇಲ್ಲಿ ಎಮರ್ಜೆನ್ಸಿ 442 ಸೆಂಟರುಗಳು ಕೆಲಸ ಮಾಡುತ್ತಿವೆ. ಅಲ್ಲಿ 80600 ಜನ ಮಕ್ಕಳು ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ಇನ್ನು ಕುಡಿಯುವ ನೀರಿನ ಬಾವಿಗಳ ವಿಚಾರ ಹೇಳುವುದಾದರೆ, ಬೋರ್‌ವೆಲ್ಸ್ ಮೂಲಕ 118 ಬಾವಿಗಳನ್ನು ಮಾಡಿಸಿದೆ. ಅವುಗಳಲ್ಲಿ 78ರಲ್ಲಿ ನೀರು ಬಿದ್ದಿದೆ. ಆ ಪೈಕಿ 50 ಬಾವಿಗಳಿಗೆ ಪಂಪನ್ನು ಫಿಟಪ್ ಮಾಡಿದೆ. ಇನ್ನು 40 ಬಾವಿಗಳಲ್ಲಿ ನೀರು ಬಿದ್ದಿಲ್ಲ.

ಇನ್ನು ಅಲ್ಲಿ ಹುಲ್ಲಿನ ಕೊರತೆ ಅಷ್ಟಾಗಿ ಕಾಣುವುದಿಲ್ಲ.

ಇನ್ನು ಬಳ್ಳಾರಿ ತಾಲ್ಲೂಕಿಗೆ ಬಂದರೆ ಅಲ್ಲಿ 8 ತಾಲ್ಲೂಕುಗಳಲ್ಲಿ ಮಳೆ ಬಹಳ ಕಡಮೆಯಾಗಿ ಬಿದ್ದಿದೆ. ಬಳ್ಳಾರಿ ತಾಲ್ಲೂಕು ಒಂದು ಬಿಟ್ಟು ಉಳಿದ ಕಡೆ ಖಾರೀಫ್ ಬೆಳೆಯು ಬಿತ್ತನೆಯಾಗಿದೆ. ಮುರ್ಕುಂಪುರ ತಾಲ್ಲೂಕಿನಲ್ಲಿ ಮಳೆಯಲ್ಲದೆ ಬೆಳೆ ಒಣಗುತ್ತದೆ. ಈ ವರ್ಷ 5 ಲಕ್ಷದ 2900 ರೂಪಾಯಿಗಳಷ್ಟು ಒದಗಿಸಿತ್ತು, ಅದರಲ್ಲಿ 89 ಸಾವಿರ ರೂಪಾಯಿ ಖರ್ಚಾಗಿದೆ. ಆಲ್ಲಿ 5 ತಾಲ್ಲೂಕುಗಳಲ್ಲಿ ಪರಿಹಾರ ಕಾಮಗಾರಿ ಕೈಕೊಳ್ಳಲಾಗಿದೆ. ಸಂಡೂರು, ಕೂಡ್ಲಿಗಿ, ಶಿರಗುಪ್ಪ, ಹರಪನಹಳ್ಳಿ, ಹಡಗಲಿ ಇವೇ ಆ 5 ತಾಲ್ಲೂಕುಗಳು. ಅಪೂರ್ಣವಾಗಿರುವ 11 ಕೆಲಸಗಳಿವೆ. ಅವು 64 ಫ್ಯಾಮಿನ್ ರಿಲೀಫ್ ಗ್ರಾಂಟ್ಸ್ ಮೂಲಕ ಆಗಬೇಕಾಗಿವೆ, ಅವನ್ನು ಪೂರ್ಣ ಮಾಡಲು ಪ್ರಯತ್ನ ಮಾಡಲಾಗಿದೆ. ಇದರ ಜೊತೆಗೆ 15 ಹೊಸ ಕೆಲಸ ತೆಗೆದುಕೊಳ್ಳಬೇಕೆಂದು ತಿಳಿಸಿದೆ. 17 ಸಾವಿರ ಜನರಿಗೆ ಸಾಯಿಲ್ ಕನ್‌ಸರ್ವೇಷನ್‌ಗೆ ಸಂಬಂಧಪಟ್ಟಂತೆ ಕೆಲಸ ಒದಗಿಸಿದೆ. ಒಂದು ಲಕ್ಷ 24 ಸಾವಿರ ರೂಪಾಯಿ ಸಾಯಿಲ್ ಕನ್‌ಸರ್ವೇಷನ್ನಿಗೆ ಖರ್ಚಾಗಿದೆ- ಡಿ. ಪಿ. ಎ. (ಡ್ರಾಟ್ ಪ್ರೋನ್ ಏರಿಯ) ಪ್ರೋಗ್ರಾಂ ಎರಡು ತಾಲ್ಲೂಕುಗಳಲ್ಲಿ ಜಾರಿಗೆ ಕೊಟ್ಟಿದೆ, ಹರಪನಹಳ್ಳಿ ಮತ್ತು ಹಡಗಲಿ ಈ ತಾಲ್ಲೂಕುಗಳಲ್ಲಿ ಅದರ ಕೆಲಸವಿದೆ. ಇದಕ್ಕೆ 16 ಲಕ್ಷ 19 ಸಾವಿರ ರೂಪಾಯಿ ಒದಗಿಸಿದೆ. 1972ನೇ ಎಪ್ರಿಲ್‌ನಲ್ಲಿ 1237 ಜನರಿಗೆ, ಮೇ ನಲ್ಲಿ 819 ಜನರಿಗೆ, ಜೂನ್‌ನಲ್ಲಿ 897 ಜನರಿಗೆ ಕೆಲಸ ಕೊಡಲಾಗಿದೆ. ಡಿ ಪಿ ಎ ಪ್ರೋಗ್ರಾಂ ಪ್ರಕಾರ 52 ಕೆಲಸ ನಡೆಯುತ್ತಿದೆ. 115 ಕುಡಿಯುವ ನೀರಿನ ಬಾವಿಗಳಿಗೆ ವ್ಯವಸ್ಥೆ ಮಾಡಬೇಕಾಗಿದೆ. 22 ಬೋರ್ ವೆರ್ಸ್ ತೆಗೆದು 7 ಬಾವಿಗಳಿಗೆ ಹ್ಯಾಂಡ್ ಪಂಪನ್ನು ಹಾಕಿದೆ. 524 ಫೇರ್ ಪ್ರೈಸ್ ಅಂಗಡಿಗಳು ಬಳ್ಳಾರಿ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿವೆ. ಎಮರ್ಜೆನ್ಸಿ ಫೀಡಿಂಗ್ ಪ್ರೋಗ್ರಾಂ ಪ್ರಕಾರ 223 ಕೇಂದ್ರಗಳಲ್ಲಿ ಸುಮಾರು 37400 ಮಕ್ಕಳಿಗೆ ಆಹಾರ ನೀಡಲಾಗುತ್ತಿದೆ. ಭೂ ಅಭಿವೃದ್ಧಿ ಬ್ಯಾಂಕಿನ ಮೂಲಕ ತೆಗೆದು ಕೊಂಡಿರುವ ಬಾವಿಗಳ ಕೆಲಸ ಈ ರೀತಿ ಇದೆ: ಬಳ್ಳಾರಿಯಲ್ಲಿ 216, ಹರಪನಹಳ್ಳಿಯಲ್ಲಿ 397, ಹೊಸಪೇಟೆಯಲ್ಲಿ 276, ಹಡಗಲಿಯಲ್ಲಿ 379, ಕೊಟ್ಟೂರಿನಲ್ಲಿ 350, ಸಿರಗುಪ್ಪದಲ್ಲಿ 1 6, ಸಂಡೂರಿನಲ್ಲಿ 156—ಇಷ್ಟು ಬಾವಿಗಳ ಕೆಲಸ ಮಂಜೂರಾಗಿದೆ.

ರಾಯಚೂರು ಜಿಲ್ಲೆಯಲ್ಲಿ ರಾಯಚೂರು, ಮಾನ್ವಿ, ಲಿಂಗಸುಗೂರು' ದೇವದುರ್ಗ, ಸಿಂಧನೂರು-ಈ ತಾಲ್ಲೂಕುಗಳಲ್ಲಿ ಬಿತ್ತನೆ ಕೆಲಸವಾಗಿದೆ. ಕುಷ್ಟಗಿ, ಕೊಪ್ಪಳ, ಎಲಬುರ್ಗ, ಗಂಗಾವತಿ-ಈ ತಾಲ್ಲೂಕುಗಳಲ್ಲಿ ಮಳೆ ಸಾಕಷ್ಟಿಲ್ಲದೆ ಬಿತ್ತನೆ ಕೆಲಸ ನಿಂತಿದೆ. ಒಟ್ಟು ಸೇರಿದ 12.15 ರಷ್ಟು ಪ್ರದೇಶದಲ್ಲಿ ಮಾತ್ರ ಕೆಲಸ ನಿಂತಿದೆ. ಕುಷ್ಟಗಿ ತಾಲ್ಲೂಕಿನಲ್ಲಿ ಬಿತ್ತನೆ ಮಾಡಿಲ್ಲ.

ಕೊಪ್ಪಳ ತಾಲ್ಲೂಕಲ್ಲಿ ಸೇಕಡ 40 ರಷ್ಟು ಪ್ರದೇಶದಲ್ಲಿ ಬತ್ತನೆಯಾಗಿದೆ. ಎಲಬರ್ಗ ಮತ್ತು ಗಂಗಾವತಿ ತಾಲ್ಲೂಕುಗಳಲ್ಲಿ ಕೇವಲ ಸೇಕಡ 30 ರಷ್ಟು ಪ್ರದೇಶದಲ್ಲಿ ಬತ್ತನೆಯಾಗಿದೆ. ಕೊಪ್ಪಳ ಗಂಗಾವತಿ, ಎಲಬುರ್ಗ ಮತ್ತು ಕುಷ್ಟಗಿ ತಾಲ್ಲೂಕುಗಳಲ್ಲಿ ಸ್ಥಿತಿ ಸ್ವಲ್ಪ ಕೆಟ್ಟಿದೆಯೆಂದು ಹೇಳ ಬಹುದು. 1972-73 ರಲ್ಲಿ 64 ಫ್ಯಾಮಿನ್ ರಿಲೀಫ್ ಬಾಬಿನಲ್ಲಿ 93 ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ, ಇದರಲ್ಲಿ ಕಮ್ಯೂನಿಕೇಷನ್ನಿಗೆ ಸಂಬಂಧಪಟ್ಟ 70 ಕೆಲಸ, ಇರಿಗೇಷನ್ನಿಗೆ ಸಂಬಂಧಪಟ್ಟ 17 ಕೆಲಸ ಮತ್ತು ಇತರೇ ಕೆಲಸ 6 ಇವೆ. ಕಮ್ಯೂನಿಕೇಷನ್‌ಗೆ ಸಂಬಂಧಪಟ್ಟ ಕೆಲಸದಲ್ಲಿ 14,415 ಜನರಿಗೆ, ಇರಿಗೇಷನ್ನಿನ ಕೆಲಸದಲ್ಲಿ 6,983 ಜನರಿಗೆ ಕೆಲಸ ದೊರೆತಿದೆ. ಇತರ ಕೆಲಸದಲ್ಲಿ ಎಷ್ಟು ಜನರಿಗೆ ಅನುಕೂಲವಾಗಿದೆ ಎಂಬುದು ಗೊತ್ತಿಲ್ಲ. ರಂಗನುಗೂರು ಮತ್ತು ಕುಷ್ಟಗಿ ತಾಲ್ಲೂಕುಗಳಲ್ಲಿ 8,384 ಜನರಿಗೆ ಕೆಲಸ ಒದಗಿಸಲಾಗಿದೆ. ಅವರಿಗೆ ಅಫಾರೆಸ್ಟೇಷನ್ ಸ್ಕೀಂನಲ್ಲಿ ಕೆಲಸ ಕೊಡಲಾಗಿದೆ. ಇದಕ್ಕೆ 5 ಲಕ್ಷ 40 ಸಾವಿರ ರೂಪಾಯಿ ಒದಗಿಸಲಾಗಿದೆ. 64 ಫ್ಯಾಮಿನ್ ರಿಲೀಫ್ ಬಾಬಿನಲ್ಲಿ 1972-73 ರಲ್ಲಿ ಕೆಲಸ ತೆಗೆದುಕೊಂಡಿದೆ. ಇದರ ಪೈಕಿ 2,93,194 ರೂಪಾಯಿ ಖರ್ಚಾಗಿದೆ.

ಡಿ ಪಿ ಎ ಪ್ರೋಗ್ರಾಂಗೆ ಕುಷ್ಟಗಿ ಮತ್ತು ರಂಗನುಗೂರ ತಾರೆಂಕ್‌ಗಳು ಸೇರಿವೆ. ಇದಕ್ಕೆ 19 ಲಕ್ಷ 56 ಸಾವಿರ ರೂಪಾಯಿ ಒದಗಿಸಿದೆ. ಇದರಲ್ಲಿ ಸಾಯಿಲ್ ಕನ್‌ಸರ್ವೇಷನ್, ಮೈನರ್ ಇರಿಗೇಷನ್ ಮತ್ತು ಅಫಾರೆಸ್ಟೇಷನ್ ಎಂದು ಮೂರು ವಿಧವಾದ ಕೆಲಸ ತೆಗೆದುಕೊಳ್ಳಲಾಗಿದೆ. ಕೊಪ್ಪಳ ಮತ್ತು ಎಲಬುರ್ಗ ತಾಲ್ಲೂಕುಗಳಲ್ಲಿ ಆಹಾರ ಧಾನ್ಯಗಳ ಅಭಾವವಿದೆ, ಹೆಚ್ಚು ಆಹಾರ ಒದಗಿಸಬೇಕು ಎಂಬುದು ಕಂಡುಬಂದಿದೆ. ಇದನ್ನು ಸ್ಥಳೀಯ ಅಧಿಕಾರಿಗಳಿಗೆ ತಿಳಿಸಲಾಗಿದೆ. ಜೋಳದ ಬೆಳೆ ಸಾಕಷ್ಟಿಲ್ಲದಿರುವುದರಿಂದ ಬೇರೆ ಆಹಾರ ಧಾನ್ಯಗಳನ್ನು ಕೊಡಲು ಏರ್ಪಾಡು ಮಾಡಿದೆ. ಇದ್ದ ಸುಮಾರು 200 ಕ್ವಿಂಟಾಲ್ ಜೋಳವನ್ನು ಅಲ್ಲಿಗೆ ಕೊಡಲಾಗಿದೆ. ಈಗ ಅಲ್ಲಿ 358 ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲಾಗಿದೆ. ಕೆಲವು ತಾಲ್ಲೂಕುಗಳಲ್ಲಿ ದನಗಳಿಗೆ ಬೇಕಾದ ಹುಲ್ಲು ಇದೆ, ಕೆಲವು ತಾಲ್ಲೂಕುಗಳಲ್ಲಿಲ್ಲ. ಬಹಳ ವರ್ಷಗಳ ಅನುಭವದಿಂದ ಇದನ್ನು ಒದಗಿಸುವುದು ಕಷ್ಟವೆಂದು ಗೊತ್ತಾಗಿದೆ. ಅಲ್ಲಿ ಕೆಲವು ಕಡೆ ನೀರಾವರಿ ಬಾವಿಗಳನ್ನು ತೆಗೆಯಲು ಅವಕಾಶವಾಗಿದೆ. ಕುಡಿಯುವ ನೀರಿನ ಸೌಕರ್ಯ ಮಾಡಲಾಗಿದೆ. ರಾಯಚೂರಿನಲ್ಲಿ 2, ಮಾನ್ವಿಯಲ್ಲಿ 3, ದೇವದುರ್ಗದಲ್ಲಿ 4 ಸಿಂಧನೂರಿನಲ್ಲಿ 2, ಕುಷ್ಟಗಿಯಲ್ಲಿ 1, ಕೊಪ್ಪಳದಲ್ಲಿ 14 ಗಂಗಾವತಿಯಲ್ಲಿ 3, ಎಲಬುರ್ಗದಲ್ಲಿ 11, ಇಷ್ಟು ಇರಿಗೇಷನ್ ವೆರ್ಕ್ಸ್ ಕೆಲಸ ತೆಗೆದುಕೊಳ್ಳಲಾಗಿದೆ. ಸಾಯಿಲ್ ಕನ್‌ಸರ್ವೇಷನ್ ಕೆಲಸದಲ್ಲಿ 12800 ಜನರಿಗೆ ಉದ್ಯೋಗ ಒದಗಿಸಲಾಗಿದೆ. ಇಲ್ಲಿಯವರೆಗೆ 6,62,162 ರೂಪಾಯಿ ಖರ್ಚಾಗಿದೆ. ಎಮರ್ಜೆನ್ಸಿ ಫೀಡಿಂಗ್ ಪ್ರೋಗ್ರಾಂ ಪ್ರಕಾರ 388 ಕೇಂದ್ರಗಳಲ್ಲಿ 57,400 ಮಕ್ಕಳಿಗೆ ಆಹಾರ ಒದಗಿಸಿದೆ. ಮೈಸೂರು ರಾಜ್ಯದ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಇರಿಗೇಷನ್ ವೆರ್ಕ್ಸ್ ಕೆಲಸ ತೆಗೆದುಕೊಳ್ಳಲಾಗಿದೆ. ಗಂಗಾವತಿಯಲ್ಲಿ 294, ಕೊಪ್ಪಳದಲ್ಲಿ 822, ರಂಗನುಗೂರಿನಲ್ಲಿ 566, ಮಾನ್ವಿಯಲ್ಲಿ 564, ಸಿಂಧನೂರಿನಲ್ಲಿ 70, ದೇವದುರ್ಗದಲ್ಲಿ 657, ಕುಷ್ಟಗಿಯಲ್ಲಿ 296, ಎಲಬುರ್ಗದಲ್ಲಿ 531 ಮತ್ತು ರಾಯಚೂರಿನಲ್ಲಿ 570 ಬಾವಿಗಳ ಕೆಲಸವನ್ನು ಮಂಜೂರು ಮಾಡಿದೆ.

ಗುಲ್ಬರ್ಗ ಜಿಲ್ಲೆ ತೆಗೆದುಕೊಂಡರೆ, ಈ ಜಿಲ್ಲೆಯಲ್ಲಿರುವ ಒಟ್ಟು ಕಲ್ಟಿವೆಬಲ್ ಏರಿಯ ಆದ 14,63,773 ಎಕರೆಗಳಲ್ಲಿ 5 ಲಕ್ಷ 87 ಸಾವಿರ ಎಕರೆಗಳಲ್ಲಿ ಕಾರೀಫ್ ಬೆಳೆಯ ಬತ್ತನೆಯಾಗಿದೆ. 64 ಫ್ಯಾಮಿನ್ ರಿಲೀಫ್ ಬಾಬಿನಲ್ಲಿ ರೆವೆನ್ಯೂ ಇಲಾಖೆ ಮೂಲಕ 84 ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಇದರ ಜೊತೆಗೆ 7 ಸಾವಿರ ಜನರಿಗೆ ಕೆಲಸ ಒದಗಿಸಲಾಗಿದೆ.

ಜನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ತೆಗೆದುಕೊಂಡಿರತಕ್ಕ ಕೆಲಸಗಳ ಜೊತೆಗೆ ಲೋಕೋಪಯೋಗಿ ಇಲಾಖೆಯ ಮುಖಾಂತರ 183 ಕಟ್ಟಡಗಳ ಕೆಲಸ, 225 ರಸ್ತೆಗಳ ಕೆಲಸ ಮತ್ತು ಮೈನರ್ ಇರಿಗೇಷನ್ನಿನ 53 ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಇದರಿಂದ ಒಟ್ಟು 11,755 ಜನಕ್ಕೆ ಕೂಲಿ ಕೆಲಸ ಒದಗಿಸಲಾಗಿದೆ.

ಇನ್ನು ಯಾದಗಿರಿ ಡಿವಿಷನ್‌ನಲ್ಲಿ 100 ಕಟ್ಟಡಗಳ ಕೆಲಸಗಳನ್ನು, ಕಮ್ಯೂನಿಕೇಷನ್ನಿನ 299 ಕೆಲಸಗಳನ್ನು ಮೈನರ್ ಇರಿಗೇಷನ್ನಿನ 34 ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಇದರ ಜೊತೆಗೆ ಸಾಯಿಲ್ ಕನ್‌ಸರ್ವೇಷನ್ ಮುಖಾಂತರ 50 ಸಾವಿರ ಜನಕ್ಕೆ ಕೂಲಿ ಒದಗಿಸಲಾಗಿದೆ. ಅದಕ್ಕಾಗಿ ಈ ವರ್ಷದಲ್ಲಿ ಗುಲ್ಬರ್ಗಾ ಡಿಸ್ಟ್ರಿಕ್ಟ್‌ಗೆ 5 ಲಕ್ಷ 80 ಸಾವಿರ ರೂಪಾಯಿಗಳನ್ನು ಒದಗಿಸಲಾಗಿತ್ತು. ಇದರ ಕೆಲಸ ಹಂತ ಹಂತವಾಗಿ ನಡೆಯುತ್ತಾ ಇದೆ. ಇದರ ಬಗ್ಗೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

30ನೇ ಜೂನ್ 1972 ರವರೆಗೆ ಖರ್ಚಾಗಿರುವ ಮೊಬಲಗು 1,08,550 ರೂಪಾಯಿ. ಈ ಕಾರ್ಯಕ್ರಮದ ಜೊತೆಗೆ ಡ್ರಾಟ್ ಏರಿಯಾ ಪ್ರೊಗ್ರಾಮಿಂಗ್ 3 ಲಕ್ಷ 98 ಸಾವಿರ ರೂಪಾಯಿ ಒದಗಿಸಲಾಗಿದೆ.

ಈ ಡ್ರಾಟ್ ಏರಿಯಾ ಪ್ರೋಗ್ರಾಂ ಅಪರೇಷನ್ನಿಗೆ ಈ ಮೂರು ತಾಲ್ಲೂಕುಗಳು ಅಂದರೆ ಶೋರಾಪುರ, ಯಾದ್‌ಗೀರ್ ಮತ್ತು ಶೋರಾಪುರ ಸೇರಿವೆ.

ಇನ್ನು ಆಹಾರದ ಪರಿಸ್ಥಿತಿ ಬಗ್ಗೆ ಹೇಳುವುದಾದರೆ ಒಟ್ಟು 750 ನ್ಯಾಯಬೆಲೆ ಅಂಗಡಿಗಳು 694 ಗ್ರಾಮಾಂತರ ಪ್ರದೇಶಗಳಲ್ಲಿ ಇವೆ, 56 ನಗರ ಪ್ರದೇಶಗಳಲ್ಲಿ ಇವೆ.

ಇನ್ನು ಎಮೆರ್ಜೆನ್ಸಿ ಫೀಡಿಂಗ್ ಪ್ರೊಗ್ರಾಂಗಳು 354 ಸೆಂಟರುಗಳಲ್ಲಿ ಇವೆ. ಅದರಿಂದ 67,400 ಮಕ್ಕಳಿಗೆ ಲಾಭವಾಗಿದೆ.

ಇನ್ನು ಕುಡಿಯುವ ನೀರಿನ ಬಾವಿ ಆಳ ಮಾಡುವುದಕ್ಕೋಸ್ಕರ 1972-73ನೇ ಸಾಲಿನಲ್ಲಿ 269 ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ.

ಇನ್ನು ಮೈನೂರು ಸ್ಟೇಟ್ ಡೆವಲಪ್‌ಮೆಂಟ್ ಬ್ಯಾಂಕ್ ನವರು ಇರಿಗೇಷನ್ ಬಾವಿಗಳಿಗೆ ಕೊಟ್ಟಿರುವ ಸಾಲಗಳು ಈ ರೀತಿ ಇವೆ :—

1	ಆಲಂದ್	...	714	6	ಷಹಾಪುರ್	...	170
2	ಚಿಂಚೋಳಿ	...	161	7	ಸೇಡಮ್	...	69
3	ಚಿತಾಪುರ್	...	130	8	ಶೋರ್ಲಾಪುರ್	...	71
4	ಗುಲ್ಬರ್ಗ	...	194	9	ಯಾದ್‌ಗೀರ್	...	87
5	ಜೇವರ್ಗಿ	...	126	10	ಅಫ್ಜಲ್‌ಪುರ್	...	79

ಇನ್ನು ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಕೆಲವು ಭಾಗಗಳು, ಕೋಹಿನೂರು ಸರ್ಕಲ್‌ನಲ್ಲಿ ಕೆಲವು ಭಾಗಗಳಲ್ಲಿ ಮಳೆಯಾಗಿಲ್ಲ ಎಂದು ವರದಿಯಾಗಿದೆ. ಅಲ್ಲಿ ಬಿತ್ತನೆ ಮಾಡತಕ್ಕದ್ದು ನಿಧಾನವಾಗಿದೆ. ಕೇವಲ 25 ಭಾಗದಲ್ಲಿ ಮಾತ್ರ ಈಗ ಬಿತ್ತನೆಯಾಗಿದೆ. ಆದರೆ ಡಿಸ್ಟ್ರಿಕ್ಟ್‌ನ ಇತರೇ ಭಾಗದಲ್ಲಿ ಬೆಳೆ ತಕ್ಕಮಟ್ಟಿಗೆ ಇದೆ.

1972—73 ನೇ ಸಾಲಿನಲ್ಲಿ 5,11,900 ರೂಪಾಯಿಗಳ ಪೈಕಿ 3,95,300 ರೂಪಾಯಿಗಳನ್ನು 64 ಫ್ಯಾಮಿನ್‌ನಲ್ಲಿ ಖರ್ಚು ಮಾಡಲಾಗಿದೆ. ಅದು ಜೂನ್ 1972 ರವರೆಗೆ ಖರ್ಚಾಗಿದೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಇದುವರೆಗೆ 52 ಬೋರ್‌ವೆಲ್ ಕೆಲಸ ಮುಗಿದಿದೆ.

ಶ್ರೀ ಎಸ್. ಬೈ. ಪಾಟೀಲ್.—ಇದು ಹಳೆಯ ಪಟ್ಟಿ;

Sri D. B. KALMANKAR.—The Minister is giving a report about the past. What about the worst-affected areas ? These are records of the past. Is this going to give employment to millions who are starving and who are facing starvation ? We do not want what the Government has done in the past. We want what they are doing now. There is no fodder for the cattle. There are no rains in our parts. There are no fairprice shops. We are worried about that.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು 1972—73ನೇ ಸಾಲಿಗೆ ಎಂದು ಸ್ಪಷ್ಟವಾಗಿ ಹೇಳಿದ್ದೇನೆ.

Sri D. B. KALMANKAR.—I am sorry these are figures of the past. These works are not newly-constructed. They are statements

pertaining to the past. We want what the Government has done after the commencement of the year 1972. We do not want a consolidated statement. This is waste of energy.

Sri M. K. SURPUR.—This is misleading. We want only that which the Government have done now.

Sri D. B. KALMANKAR.—Because millions are facing starvation. People have no drinking water. Cattle have no fodder.

ಅಧ್ಯಕ್ಷರು.—ತಾವು ಕೂತುಕೊಂಡರೆ ಮಂತ್ರಿಗಳು ಹೇಳುವುದಕ್ಕೆ ಬರುತ್ತದೆ. ಏತಕ್ಕೆ ಈರೀತಿ ಕೂಗುತ್ತಿದ್ದೀರಿ. First of all, Sri Kalmankar, please sit down.

Sri D. B. KALMANKAR.—We want statistics about the present situation. We do not want past statistics.

MADAM SPEAKER.—Sri Kalmankar, may please sit down. When I am standing, a senior member like Sri Kalmankar should not stand and interrupt.

(Sri D. B. KALMANKAR Still standing)

ಅಧ್ಯಕ್ಷರು.—ಮಾನ್ಯಸದಸ್ಯರು ಎಕ್ಸ್‌ಪೀರಿಯನ್ಸ್‌ಡ್ ಮೆಂಬರ್. ನಾನು ನಿಂತಿರುವಾಗ ತಾವು ಏತಕ್ಕೆ ಕೂತುಕೊಳ್ಳುವುದಿಲ್ಲ. ಈಗ ತಾವು ಕೂತುಕೊಂಡರೆ ಸರಿ. ಈರೀತಿಯಾಗಿ ಕೂಗಿಕೊಳ್ಳುವುದು ಸರಿಯಲ್ಲ. ಮಂತ್ರಿಗಳು ಹೇಳುವುದನ್ನು ಮೊದಲು ಕೇಳಿಬಿಟ್ಟು ಆಮೇಲೆ ಕ್ಲಾರಿಫಿಕೇಷನ್ ಕೇಳಬೇಕು. ಇದೆ ಮೊದಲು ಇದೇ ಕಡೆ. ಹೀಗೆ ಕೂಗುವುದು ಮುಂದು ವರೆದರೆ the hon. Members will have to face the consequence.

ಶ್ರೀ ವಾತಾಳ್ ನಾಗರಾಜ್.—ಅವರಿಗೆ ಮಂತ್ರಿಗಳ ಸ್ಟೇಟ್‌ಮೆಂಟ್ ಕೇಳಿ ಸಂಕಟ ಬರುತ್ತದೆ. ಉದ್ರೇಕ ಆಗುತ್ತದೆ. ಅದರಿಂದ ಕೂಗುತ್ತಾರೆ.

ಅಧ್ಯಕ್ಷರು.—ತಾವು ಕೂತುಕೊಳ್ಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವ್ಯವಸಾಯದ ಬಾಪಿಗಳ ಲೆಕ್ಕವನ್ನು ಹಿಂದಿನಿಂದ ತೆಗೆದು ಕೊಳ್ಳಲಾಗಿದೆ. ಅದು ಬಿಟ್ಟು ಉಳಿದುದನ್ನು 1972—73 ನೇ ಸಾಲಿನಿಂದ ಹೇಳುತ್ತಿದ್ದೇನೆ 1972—73 ನೇ ಸಾಲಿಗೆ 5,11,900 ರೂಪಾಯಿ ಒದಗಿಸಿದ್ದೇವೆ ಎಂದರೆ ಇದು ಹಳೆಯ ಕಥೆ ಅಲ್ಲ. ಇದನ್ನು ಮಾನ್ಯ ಸದಸ್ಯರು ತಿಳಿಯಬೇಕು. ಇನ್ನೂ ಹೆಚ್ಚಿನ ಹಣ ಬೇಕಾಗಿದೆ ಎಂದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಅದಕ್ಕಾಗಿ 50 ಲಕ್ಷ ರೂಪಾಯಿ ತಕಾಪಿ ಸಾಲ ಕೊಡುವ ಕೆಲಸ ತಕ್ಷಣ ಏರ್ಪಾಡಾಗಿದೆ.

3-00 P.M.

ಕೋಲಾರ ಜಿಲ್ಲೆಯಲ್ಲಿ ರಾಗಿ, ಬತ್ತ, ಮತ್ತು ಮುನುಕಿನ ಜೋಳ, ಈ ಬೆಳೆಗಳು ತಕ್ಕಮಟ್ಟಿಗೆ ಇವೆ ಎಂದು ವರದಿಯಾಗಿದೆ. ಬತ್ತ ಮತ್ತು ಕಡಲೆಕಾಯಿ ಕೆಲವು ಕಡೆ ಕಟಾವಿಗೆ ಬಂದಿದೆ. ರಾಗಿ ಮಾತ್ರ ಹೆಚ್ಚು ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ಇರುವುದರಿಂದ ಬಿತ್ತನೆಯಾಗಿಲ್ಲ. ಸೇಕಡ 10–20 ರಷ್ಟು ಮಾತ್ರ ಬಿತ್ತನೆಯಾಗಿದೆ. ಉಳಿದ ಭಾಗಗಳಲ್ಲಿ ಬಿತ್ತನೆಯಾಗುವುದಕ್ಕೆ ಮಳೆಯ ಅಭಾವದಿಂದ ತೊಂದರೆಯಾಗಿದೆ. ಕೆಲವು ಭಾಗಗಳಲ್ಲಿ ಹೊಸದಾಗಿ ನೀರಾವರಿ ಕಾಮಗಾರಿಗಳನ್ನು ರಸ್ತೆ ಕೆಲಸಗಳನ್ನು ಮತ್ತು ಇತರೇ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸ್ಥಳೀಯ ಅಧಿಕಾರಿಗಳಿಗೆ ಈಗಾಗಲೇ ತಿಳಿಸಲಾಗಿದೆ. ಇಲ್ಲಿಯವರೆಗೂ ಖರ್ಚಾಗಿರತಕ್ಕದ್ದು 23,472 ರೂಪಾಯಿಗಳು ಮಾತ್ರ.

2,34,000 ರೂಪಾಯಿಗಳನ್ನು ರಿಲೀಫ್ ಕಾಮಗಾರಿಗಳಿಗೋಸ್ಕರ ಒದಗಿಸಿದೆ. ಅದರಲ್ಲಿ ಈಗ ಎಷ್ಟು ಖರ್ಚಾಗಿದೆ ಎನ್ನುವುದು ಇಲ್ಲಿಯವರೆಗೂ ಗೊತ್ತಾಗಿಲ್ಲ. ಡ್ರಾಟ್ ಏರಿಯಾಸ್ ಪ್ರೋಗ್ರಾಂನಲ್ಲಿ 8 ತಾಲ್ಲೂಕುಗಳು ಸೇರಿವೆ. ಅದಕ್ಕಾಗಿ 65 ಲಕ್ಷ 10 ಸಾವಿರ ರೂಪಾಯಿಗಳನ್ನು ಒದಗಿಸಿದೆ. ಅದರಲ್ಲಿ ಎಷ್ಟು ಖರ್ಚಾಗಿದೆ ಎನ್ನುವುದು ಇನ್ನೂ ವರದಿಯಾಗಿಲ್ಲ. ಅಲ್ಲಿ ಆಹಾರ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಧಾನ್ಯಗಳ ಅಭಾವ ಅಷ್ಟಾಗಿ ಕಂಡುಬರುತ್ತಿಲ್ಲ ಎಂದು ಗೊತ್ತಾಗಿದೆ. ಭೂ ಅಭಿವೃದ್ಧಿ ಬ್ಯಾಂಕಿನ ಮೂಲಕ ಬಾವಿಗಳು ಇಲ್ಲಿಯವರೆಗೆ ಪೂರ್ತಿಯಾಗಿರುವ ಸಂಖ್ಯೆಯನ್ನು ಮಾತ್ರ ತಿಳಿಸಿದ್ದೇನೆ.

ಬೆಂಗಳೂರು ಜಿಲ್ಲೆಯ ಅನೇಕಲ್ ತಾಲ್ಲೂಕಿನ ಕೆಲವು ಕಡೆಗಳಲ್ಲಿ ರಾಗಿ ಬಿತ್ತನೆಯಾಗಿಲ್ಲ ಎನ್ನುವ ವರದಿ ಬಂದಿದೆ.

ಶ್ರೀ ಕೋಣಂಡೂರು ಲಿಂಗಪ್ಪ.—ಒಂದು ಕ್ಷೇತ್ರವನ್ನು ಪ್ರತಿನಿಧಿಸತಕ್ಕವರು ಮಾತನಾಡುವುದಕ್ಕೆ ಆಗದೆ ಇರುವ ಪರಿಸ್ಥಿತಿ ಈಗ ಇದೆ. ಆ ಕ್ಷೇತ್ರದ ಕೆಲವು ಜನ ನನ್ನ ಹತ್ತಿರ ಬಂದು ಹೇಳಿದರು. ಆ ಕ್ಷೇತ್ರದ ಹೆಸರು ಗುಂಡಲ್‌ಹೇಜ್. ಬಿಜಾಪುರ ಜಿಲ್ಲೆಯಲ್ಲಿ ಏನು ಪರಿಸ್ಥಿತಿ ಇದೆಯೋ ಅದಕ್ಕಿಂತಲೂ ಯಾವ ವಿಧದಲ್ಲಿಯೂ ಕಡಮೆಯಿಲ್ಲದಂತೆ ಕ್ಷಾಮ ಪರಿಸ್ಥಿತಿ ಅಲ್ಲಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಸಭೆಯ ಅಧ್ಯಕ್ಷರಿಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲದೆ ಇದ್ದರೂ ಅವರ ಕ್ಷೇತ್ರದ ಬಗ್ಗೆ ಸರ್ಕಾರಕ್ಕೆ ತಿಳಿಸುವುದಕ್ಕೆ ಸಾಕಾದಷ್ಟು ಅವಕಾಶವಿದೆ. ಸರ್ಕಾರ ಇತರೇ ಕ್ಷೇತ್ರಗಳಿಗೆ ಎಷ್ಟು ಗಮನ ಕೊಡುತ್ತದೆಯೋ ಅಷ್ಟು ಗಮನ ಪನ್ನಾದರೂ ಅವರ ಕ್ಷೇತ್ರಕ್ಕೂ ಕೊಡುತ್ತದೆ ಎಂದು ಮಾನ್ಯ ಸದಸ್ಯರು ತಿಳಿಯುತ್ತಾರೆಂದು ನಾನು ಭಾವಿಸುತ್ತೇನೆ.

ಈಗ ಇರುವಂತೆ ನಾನು ಸಭೆಯ ಮುಂದೆ ವರದಿಯನ್ನು ಇಟ್ಟಿದ್ದೇನೆ. ಅದರ ಜೊತೆಗೆ ಇನ್ನು ಯಾವ ಯಾವ ಪ್ರದೇಶದಲ್ಲಿ ತಕ್ಷಣ ಹೆಚ್ಚು ಹಣ ಬೇಕು, ಏನೇನು ಕಾರ್ಯಕ್ರಮಗಳು ಬೇಕು ಅದನ್ನೆಲ್ಲ ಸರ್ಕಾರ ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಹಣವನ್ನು ಒದಗಿಸುತ್ತದೆ ಎನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರಿಗೆ ಎಷ್ಟು ಕಳವಳ ಅವರವರ ಕ್ಷೇತ್ರದ ಬಗ್ಗೆ ಇದೆಯೋ ಅದೇ ರೀತಿಯಲ್ಲಿ ಕಳವಳ ಸರ್ಕಾರಕ್ಕೂ ಇದೆ ಎನ್ನುವುದನ್ನು ಸರ್ಕಾರ ಮನಗಂಡಿದೆ. ಯಾವ ವಿಧದಲ್ಲಿಯೂ ಹಣದ ಅಭಾವದಿಂದ ಅಥವಾ ಉಳಿದ ತೊಂದರೆಗಳಿಂದ ಕೆಲಸವಾಗುವುದಿಲ್ಲ ಎನ್ನುವುದನ್ನು ತಾವು ತಿಳಿಯಬಾರದು. ಎಲ್ಲ ಕಾರ್ಯಕ್ರಮಗಳನ್ನೂ ಕೈಕೊಳ್ಳುತ್ತೇವೆ ಎಂದು ಮಾತ್ರ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಎಂ. ಚಂದ್ರಶೇಖರ್.—ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ ಮತ್ತು ಷಿಕಾರಿಪುರ ತಾಲ್ಲೂಕುಗಳ ಬಗ್ಗೆ ಅಧಿಕೃತ ವರದಿಗಳೇನಾದರೂ ಬಂದಿವೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧಿಕಾರಯುತವಾದ ವರದಿಗಳು ಬಂದಿಲ್ಲ. ಅಲ್ಲಿಂದ ವರದಿಗಳು ಬಂದ ಕೂಡಲೇ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ—ಎಲ್ಲೆಲ್ಲಿ ಅಗತ್ಯವಿದೆ ಅಲ್ಲೆಲ್ಲ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಮಾನ್ಯ ಮಂತ್ರಿಗಳು ಹೇಳಿರುವುದರಿಂದ ನಾನು ವಿವರಣೆ ಕೇಳತಕ್ಕದ್ದು ಇಲ್ಲ. ಆದರೆ ಹಾನನ ಜಿಲ್ಲೆಯಲ್ಲಿ ಬಿತ್ತನೆ ಮಾಡಿದ ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಆಲೂಗಡ್ಡೆ ನಷ್ಟವಾಗಿದೆ. ಅಲ್ಲಿ ಮುಂಗಾರು ಬೆಳೆ ಮಾತ್ರ ತೆಗೆಯುವುದಕ್ಕೆ ಸಾಧ್ಯ. ಹಿಂಗಾರು ಬೆಳೆ ತೆಗೆಯಲು ಸಾಧ್ಯವಿಲ್ಲ. ಹಾಕಿದ ಬಿತ್ತನೆ, ಗೊಬ್ಬರ ಎಲ್ಲ ನಷ್ಟವಾಗಿ ಬೆಳೆಯೇ ಬಂದಿಲ್ಲ. ರೈತರು ಬಹಳ ನಷ್ಟ ಹೊಂದಿದ್ದಾರೆ. ಅವರಿಗೆ ಏನಾದರೂ ಪರಿಹಾರ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನಾಗಲೇ ವಿನಂತಿ ಮಾಡಿಕೊಂಡೆ. ರಾಜ್ಯದ ಯಾವ ಯಾವ ಭಾಗದಲ್ಲಿ ತೊಂದರೆಗಳಿವೆ ಅದರ ಬಗ್ಗೆ ಕೂಡಲೇ ವರದಿಯನ್ನು ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆಂದು.

ಶ್ರೀ ಕೆ. ಎಫ್. ಪಾಟೀಲ್.—ಈಗ ಅಧಿವೇಶನ ಮುಗಿಯುತ್ತ ಬಂತು. ಮಾನ್ಯ ರೆವನ್ಯೂ ಮಂತ್ರಿಗಳು ಅಥವಾ ಬೇರೆ ಯಾರಾದರೂ ಮಂತ್ರಿಗಳು ರಾಜ್ಯದಲ್ಲಿ ಟೂರ್ ಮಾಡಿ ಪರಿಸ್ಥಿತಿಯನ್ನು ತಿಳಿದುಕೊಂಡು ಬಂದು ಸೂಕ್ತ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವುದು ಉತ್ತಮವಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಕೆ. ಎಚ್. ಪಾಟೀಲರು ಧಾರವಾಡ ಜಿಲ್ಲೆ ಮತ್ತು ಬಿಜಾಪುರ ಜಿಲ್ಲೆಯ ಕೆಲವು ಭಾಗಗಳಿಗೆ ಭೇಟಿ ಕೊಟ್ಟು ನೋಡಿಕೊಂಡು ಬರುವುದಕ್ಕೆ ಹೋಗಿದ್ದಾರೆ. ಅವರು ಬಂದ ಕೂಡಲೇ ಹೆಚ್ಚು ಕಾರ್ಯಕ್ರಮ ಅವಶ್ಯವಿದ್ದಲ್ಲಿ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಫ್. ಪಾಟೀಲ್.—ಅಭಾಗದ ಎಂ. ಎಲ್. ಎ.ಗಳು ಧಾರವಾಡ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಇದೆ. ಅಭಾವಕ್ಕೆ ಸಮೀಪದ ಪರಿಸ್ಥಿತಿ ಇದೆ ಎಂದು ಹೇಳಿದಾಗಲೂ ಕೂಡ ಡಿವಿಜನಲ್ ಕಮೀಷನರ್ ಮತ್ತು ಇತರ ಅಧಿಕಾರಿಗಳೊಂದಿಗೆ ಮೊನ್ನೆ ಧಾರವಾಡದಲ್ಲಿ ಮೀಟಿಂಗ್ ಮಾಡಿ, ಎಲ್ಲ ಸರಿಯಾಗಿದೆ, ಬೆಳೆ ಉತ್ತಮವಿದೆ, ಅಭಾವ ಪರಿಸ್ಥಿತಿಯಾಗಲೀ, ಅಭಾವಕ್ಕೆ ಸಮೀಪದ ಪರಿಸ್ಥಿತಿಯಾಗಲೀ ಇಲ್ಲ ಎಂದು ಸರ್ಕಾರಕ್ಕೆ ವರದಿ ಮಾಡಿದ್ದಾರೆ. ಆ ಜಿಲ್ಲೆಯ ಪರಿಸ್ಥಿತಿ ಹೇಗಿದೆ ಎಂದು ಅಲ್ಲಿಯ ಎಂ.ಎಲ್.ಎ. ಗಳೇಳುವುದಕ್ಕೂ, ಅಧಿಕಾರಿಗಳು ಹೇಳುವುದಕ್ಕೂ ವ್ಯತ್ಯಾಸವಿದ್ದರೆ, ಬೇಕಾದರೆ ಯಾರಾದರೂ ಬನ್ನಿ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಯಾವ ಕೆರೆಯಲ್ಲಿ ಅದರೂ ನೀರು ಸಾಕಷ್ಟು ಇದೆಯೇ ಎಂಬುದನ್ನು ತಾವೇ ನೋಡಿ. ಕೇವಲ ಒಂದು ತಿಂಗಳು ತಡೆಯುವಷ್ಟು ಮಾತ್ರ ನೀರು ಇದೆ. ಬರೀ ಆಫೀಸರ್ಸ್ ರಿಪೋರ್ಟಿನಂತೆ ಹೋದರೆ, ಆಗುವುದಿಲ್ಲ ಮತ್ತು ರಿಪೋರ್ಟು ತರಿಸಿಕೊಳ್ಳುತ್ತೇನೆ ಎಂದರೆ ನಮಗೆ ಸಮಾಧಾನವಾಗುವುದಿಲ್ಲ. ಮಾನ್ಯ ಕಂದಾಯ ಮಂತ್ರಿಗಳು ಅಲ್ಲಿಗೆ ಹೋಗಿಬರಬೇಕು ಎಂದು ನನ್ನ ಆಸೆ.

Sri J. P. SARWESH.—May I Know how much amount is granted to Gulbarga for giving Takavi loans and the number of famine works taken in all the taluks of Gulbarga District ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಸ್ಟೇಟ್‌ಮೆಂಟ್ ಓದಿದಾಗ ಮಾನ್ಯ ಸದಸ್ಯರ ಕೇಳಿಸಿಕೊಳ್ಳಲಿಲ್ಲದಿದ್ದರೆ ಏನು ಮಾಡುವುದು ! ಪುನಃ ಓದಬೇಕು ಅಂದರೆ ಓದುತ್ತೇನೆ.

Sri J. P. SARWESH.—Only three taluks are mentioned. There are 10 taluks in Gulbarga. There have been complaints that famine conditions exist in all the taluks. Therefore may I know how much amount is earmarked to Gnlbarga ?

ಶ್ರೀ ವಿ. ಕೃಷ್ಣರಾವ್.—ಕೋರಾರ ಡಿಸ್ಟ್ರಿಕ್ಟ್‌ನಲ್ಲಿ 10 ರಿಂದ 15 ಪರ್ಸೆಂಟ್ ಬಿತ್ತನೆ ಕೂಡ ಆಗಿಲ್ಲ. ಹೀಗಿರುವ ಪಕ್ಷದಲ್ಲಿ ಅಲ್ಲಿ ಇನ್ನೂ ರಿಲೀಫ್ ವರ್ಕ್ಸ್ ಆಗಲೀ, ನೀರಾವರಿ ಬಾವಿಗಳ ಆಳವನ್ನು ಹೆಚ್ಚಿಸುವುದಾಗಲೀ, ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಬರೀ ಅಧಿಕಾರಿಗಳ ರಿಪೋರ್ಟಿನ ಮೇಲೆ ಇತ್ಯರ್ಥ ಮಾಡದೆ ತಾವೇ ಸ್ವತಃ ಪ್ರತಿಯೊಂದು ತಾಲ್ಲೂಕಿನಲ್ಲಿ ಪ್ರವಾಸಮಾಡಿ, ರೈತರ ಕಷ್ಟ ಅರಿತು ಸೂಕ್ತಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪರಿಸ್ಥಿತಿ ವಿಷಮಿಸುತ್ತದೆ ಎಂದು ತಮ್ಮ ಗಮನಕ್ಕೆ ತರುತ್ತೇನೆ.

Sri D. B. KALMANKAR.—The situation in Gulbarga is becoming very critical. The hon. Minister mentioned about three taluks ; but the situation in other Taluks of Afzalpur, Aland, Jewargi is very bad. May I know what works are taken up in each taluk and how much amount is spent in six months and what are the types of works undertaken, the number of persons employed ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ರೆವಿನ್ಯೂ ಸಚಿವರು ಕೊಟ್ಟಂಥ ರಿಪೋರ್ಟ್‌ನಲ್ಲಿ ಮೈಸೂರು ಜಿಲ್ಲೆಯಲ್ಲಿ ಕ್ಷಾಮ ಪರಿಸ್ಥಿತಿ ಇಲ್ಲ ಎಂದು ಹೇಳಿದ್ದಾರೆ. ಇಲ್ಲಿ ಮುಖ್ಯವಾಗಿ ಬೆಳೆಯುತಕ್ಕ ಬೆಳೆ ಜೋಳ. ಮಳೆ ಬಂದರೂ ಪ್ರಯೋಜನವಿಲ್ಲ. ಬೆಳೆ ಇಟ್ಟದ್ದು, ಆ ಬೆಳೆಗೂ ಚಿಟ್ಟೆ ಬಂದಿದೆ. ಆದ್ದರಿಂದ ನಾಲ್ಕು ಆಣೆ, ಆರು ಆಣೆ ಬೆಳೆಯಾಗಿದೆ. ಚಾಮರಾಜನಗರದ ಕಡೆ ಜೋಳದ ಬೆಳೆಗೆ ತೊಂದರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳಿಂದ ರಿಪೋರ್ಟು ತರಿಸಿಕೊಂಡು, ಮೈಸೂರು ಜಿಲ್ಲೆಯಲ್ಲಿ ಎಲ್ಲೆಲ್ಲಿ ತೊಂದರೆಯಾಗಿದೆ, ಅಂಥ ಕಡೆ ರೀಲಿಫ್ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಹೇಳಬಯಸುತ್ತೇನೆ. ಅನೇಕ ಕಡೆ ಬೆಳೆಗೆ ಒಂದು ರೀತಿಯ ಬೆಂಕಿ ಬಿದ್ದಿದೆ. ರಾಗಿ ಬಿತ್ತನೆ ಮಾಡುವ ಸಮಯದಲ್ಲಿ ಮಳೆ ಇಲ್ಲದ್ದರಿಂದ ಬಿತ್ತನೆ ಮಾಡಿಲ್ಲ. ಮೈಸೂರು ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಉಂಟಾಗಿದೆ. ಇದರ ಬಗ್ಗೆ ತಾವು ಕೂಡಲೇ ರಿಪೋರ್ಟು ತರಿಸಿಕೊಂಡು, ರಿಲೀಫ್ ಕ್ಷಾಮಗಾರಿಗಳನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ಮಾಡಬೇಕು ಮತ್ತು ತಕಾವಿ ಸಾಲವನ್ನು ಮೈಸೂರು ಜಿಲ್ಲೆಗೂ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಶರಣಪ್ಪ.—ಮಾನ್ಯ ಕಂದಾಯ ಮಂತ್ರಿಗಳು ರಾಯಚೂರು ಜಿಲ್ಲೆಯ ಒಂದೆರಡು ತಾಲ್ಲೂಕುಗಳಲ್ಲಿ ಮಾತ್ರ ಅಭಾವಪರಿಸ್ಥಿಲ್ಲೇ ಇದೆ ಎಂದು ಹೇಳಿದರು. ಇದು ಸರಿಯಲ್ಲ, ಇಡೀ ಜಿಲ್ಲೆಯೇ ಇವತ್ತಿನ ದಿವಸ ಅಭಾವಪರಿಸ್ಥಿತಿಗೆ ಈಡಾಗಿದೆ. ಕೊಪ್ಪ, ಯಲ್ಬುರ್ಗಿ, ಲಿಂಗಸಗೂರು ಮತ್ತು ರಾಯಚೂರು ವಿಭಾಗದಲ್ಲಿ ಹೋದವರ್ಷ ಮಳೆ ಇಲ್ಲದೆ ರಿಸಷನ್ ಸಲುವಾಗಿ ಪ್ರಪೋಸಲ್ಸ್ ಕಳುಹಿಸಿದ್ದಾರೆ. ದನಕ್ಕೆ ಮೇವು ಇಲ್ಲ, ಜನಗಳಿಗೆ ತಿನ್ನುವುದಕ್ಕೆ ಇಲ್ಲ. ರಾಯಚೂರು ಜಿಲ್ಲೆಯ ಅರ್ಧ ಭಾಗ, ಮಾನ್ವಿ ತಾಲ್ಲೂಕ್ ಈ ಅಭಾವ ಪರಿಸ್ಥಿತಿಗೆ ಈಡಾಗಿದೆ. ಆದ್ದರಿಂದ ಮಂತ್ರಿಗಳುಅಲ್ಲಿಯ ಅಂಕಿಸಂಖ್ಯೆಗಳನ್ನು ತರಿಸಿಕೊಂಡು ಆ ಜಿಲ್ಲೆಗೆ ಹೆಚ್ಚಿನ ಗಮನಕೊಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸನ್ಮಾನ್ಯ ಅಧ್ಯಕ್ಷಣಿಯವರೇ, ಅನೇಕರು ತಾಲ್ಲೂಕಿನ ಬಗ್ಗೆ ಮಾನ್ಯ ಸಚಿವರು ವರದಿ ಕೊಡುತ್ತೇನೆ ಎಂದು ಹೇಳಿದರು. ಆದರೆ ಅಲ್ಲಿಯ ಪರಿಸ್ಥಿತಿ ಬಹಳ ಕಷ್ಟವಾಗಿದೆ ಎಂದು ನನಗನ್ನಿಸುತ್ತದೆ. ಈ ತಾಲ್ಲೂಕು ರಾಗಿ ಬೆಳೆಯುವ ಪ್ರದೇಶ. ಅಲ್ಲಿ ಉಳುಮೆ ಆಗಿಲ್ಲ, ಯಾವ ಕೆರೆ ಗುಂಡಿಯಲ್ಲಿಯೂ ನೀರು ಇಲ್ಲ. ಇದರ ಬಗ್ಗೆ ಅನೇಕಸಲ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೇನೆ. ಈ ಒಂದು ಪರಿಸ್ಥಿತಿಯಲ್ಲಿ ಸರ್ಕಾರದವರು ರೈತರಿಗೆ ಕೊಟ್ಟಿರತಕ್ಕ ಸಾಲವನ್ನು ವಸೂಲು ಮಾಡುವುದಕ್ಕೆ ಹೊರಟಿದ್ದಾರೆ. ಮಳೆ ಇಲ್ಲದೆ ಇರುವ ಕಾಲದಲ್ಲಿ ಸಾಲ ಎಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ ? ದಯವಿಟ್ಟು ಸಾಲ ವಸೂಲು ಮಾಡುವುದನ್ನು ಮುಂದಕ್ಕೆ ಹಾಕಬೇಕು. ಅಲ್ಲಿ ದನಗಳಿಗೆ ಮೇವು ಇಲ್ಲ, ಹಸುಗಳನ್ನು 50—20 ರೂಪಾಯಿಗೆ ಮಾರುವ ಪರಿಸ್ಥಿತಿ ಬಂದಿದೆ. ಅಲ್ಲಿಯ ಜನ ಕಷ್ಟದಿಂದ ಕಣ್ಣೀರು ಇಡುತ್ತಿದ್ದಾರೆ. ತಾವು ದಯವಿಟ್ಟು ಅಲ್ಲಿಗೆ ಹೋಗಿ ನೋಡಿ, ಅವರಿಗೆ ಬಿತ್ತನೆ ಬಗ್ಗೆ ಏನು ಏನು ಅನುಕೂಲಬೇಕೋ ಅದನ್ನು ಶೀಘ್ರದಲ್ಲಿ ವಹಿಸಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Sri BAPU RAO PATIL.—The Hon. Minister just now stated that only one village in Bidar has been badly affected by famine. But I have toured the entire area and seen that it is not only one village, but the villages of Basava Kalyan, Aurad and Bhalki taluks in Bidar Distret have also been affected. There is no fodder, foodgrains, and water for drinking as well as for animals. Animals are dying. I have told this to the officials also. These are facts and I want to bring them to the notice of the Hon. Minister and this House.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ರಾಜ್ಯದಲ್ಲಿರತಕ್ಕ ಪರಿಸ್ಥಿತಿಯನ್ನು ಸರ್ಕಾರ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಇಷ್ಟು ಅರಕಿಅಂಶಗಳನ್ನು ಒದಗಿಸಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ, ಪರಿಸ್ಥಿತಿ ಎಲ್ಲೆಲ್ಲಿ ಭೀಕರವಾಗಿದೆ ಎನ್ನುವುದಕ್ಕೆ ಕೂಡಲೇ ವರದಿ ತರಿಸಿಕೊಳ್ಳುವುದರ ಜೊತೆಗೆ ಈ ಶಾಸನ ಸಭೆ ಅಧಿವೇಶನ ಮುಗಿದಮೇಲೆ ಅವಶ್ಯಕವಾಗಿ ಯಾವ ಯಾವ ಸ್ಥಳಗಳನ್ನು ನೋಡಬೇಕು ಎಂದು ತಾವು ಹೇಳುತ್ತಿರೋ ಆ ಸ್ಥಳಗಳನ್ನು ನೋಡಿ, ಮುಂಚಿತವಾಗಿ ಹಣ ಮತ್ತು ಸವಲತ್ತುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಸ್ಥೂಲವಾಗಿ ಹೇಳಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವೈಸೂರು ಜಿಲ್ಲೆಯಲ್ಲಿ ಕೂಡ ಅಭಾವ ಪರಿಸ್ಥಿತಿ ಕೆಲವು ಕಡೆ ಇದೆಯೆಂದು ಮಾನ್ಯ ಪುಟ್ಟಸ್ವಾಮಿಯವರು ಹೇಳಿದ್ದಾರೆ ರಾಜ್ಯದ ಇತರ ಕಡೆಗಳಲ್ಲೂ ತೊಂದರೆ ಇದೆ. ಮಳೆ ಬಂದರೆ ಕೆಲವು ಭಾಗದಲ್ಲಿ ರಾಗಿ ಬಿತ್ತನೆ ಮಾಡುವುದಕ್ಕೆ ಸಹಾಯವಾಗುತ್ತದೆ. ಕೆಲವಕಡೆ ಬಿತ್ತನೆ ಮಾಡುವುದಕ್ಕೆ ಕಾಲ ಮಿತಿಮೀರಿ ಹೋಗಿದೆ ಇದನ್ನೆರ್ಲಾ ನೋಡಿಕೊಂಡು ಸಹಾಯಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

Statement by the Minister of State for Animal Husbandry *re.* Retrenchment of some employees in the food Department

ಶ್ರೀ ಎನ್. ಚಿಕ್ಕೇಗೌಡ.— 20 ಜನ ನಾಲ್ಕನೇ ಚರ್ಚೆ ನೌಕರರನ್ನು ಆಹಾರ ಮತ್ತು ಸಿವಿಲ್ ಸಪ್ಲೈ ಇಲಾಖೆಯಲ್ಲಿ ತೆಗೆದುಹಾಕಿದ ಬಗ್ಗೆ ಮಾನ್ಯ ಎಂ. ಎಸ್. ಕೃಷ್ಣನ್‌ರವರು ಕೇಳಿದ ಪ್ರಶ್ನೆಗೆ